# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

## ಸಿ.ಸಿ. ನಂಬ್ರ: 529/2017

ಪಿರ್ಯಾಧಿದಾರರು :- ಪೊಲೀಸ್ ವೃತ್ತನಿರೀಕ್ಷಕರು, ಕುಂದಾಪುರ

- ವಿರುದ್ದ -

ಆಪಾದಿತರು :- ಸೈಪುದ್ದಿನ್ ಮತ್ತ

: ಆಪಾದನೆ :

ಶ್ರೀ ಪ್ರವೀಣ್ ನಾಯಕ್, ಎಲ್ಎಲ್.ಎಮ್., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ

ಸೈಪುದ್ದಿನ್ ಮತ್ತ, 48 ವರ್ಷ,
ತಂದೆ: ಸೈಬು ಮತ್ತ,
ವಾಸ: ನವಾಯತ್ ಕಾಲೋನಿ,
ತಂಜೀಮ್ ರೋಡ್, ಭಟ್ಕಳ ರೋಡ್,
ಉತ್ತರ ಕನ್ನಡ.

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ:

ದಿ. 10.12.2016 ರಂದು ಬೆಳಿಗ್ಗೆ 9.35 ಗಂಟೆ ಸಮಯಕ್ಕೆ ಆರೋಪಿತರಾದ ನೀವು ಕೆಎಲ್ 10 ಎನ್ 4837 ನೇ ನಂಬ್ರದ ಕಾರನ್ನು ಉಡುಪಿ ಕಡೆಯಿಂದ ಕುಂದಾಪುರ ಕಡೆಗೆ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿರುವಿರೆಂದೂ, ಈ ಮುಖಾಂತರ ನೀವು ಭಾ.ದಂ.ಸಂ. ಕಲಂ 279 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವೆಸಗಿದ್ದು, ಸದ್ರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡುರುವಿರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಕುಂದಾಪುರ ತಾಲೂಕು ಬೀಜಾಡಿ ಗ್ರಾಮದ ಬೀಜಾಡಿ ವೈ ಜಂಕ್ಷನ್ ಬಳಿ ಪಶ್ಚಿಮ ಬದಿಯ ರಾ.ಹೆ. 66 ರಸ್ತೆಯಲ್ಲಿ ಚಾ.ಸಾ. 1ನೇಯವರ ಜೊತೆಯಲ್ಲಿ ಪಶ್ಚಿಮ ಬದಿಯ ರಾ.ಹೆ. 66 ರಸ್ತೆ ದಾಟುತ್ತ ರಸ್ತೆಯ ಪೂರ್ವ ಅಂಚಿಗೆ ತಲುಪುತ್ತಿದ್ದ ಗುರುರಾಜ ಬಾಯರಿಯವರಿಗೆ ಡಿಕ್ಕಿ ಹೊಡೆದ ಪರಿಣಾಮ ಗುರುರಾಜ

ಬಾಯರಿಯವರ ತಲೆಗೆ ಹಾಗೂ ದೇಹದ ಇತರ ಅಂಗಾಂಗಗಳಿಗೆ ತೀವ್ರ ಸ್ವರೂಪದ ಗಾಯಗೊಂಡು ಚಿಕಿತ್ಸೆ ಬಗ್ಗೆ ಕೋಟೇಶ್ವರ ಎನ್ ಆರ್ ಆಚಾರ್ಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ ಕೆ.ಎಮ್.ಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಪಡೆದುಕೊಂಡು ದಿ. 15.12.2016 ರಂದು ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯಿಂದ ಬಿಡುಗಡೆಗೊಂಡು ಕುಂದಾಪುರ ಅಂಕದಕಟ್ಟೆಯ ಸರ್ಜನ್ ಆಸ್ಪತ್ರೆಯಲ್ಲಿ ದಾಖಲಿಸಿದ್ದು ದಿ. 15.12.2016 ರಂದು 8.40 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವರೆಂದು, ಈ ಮುಖಾಂತರ ನೀವು ಭಾ.ದಂ.ಸಂ. ಕಲಂ 304(ಎ) ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವೆಸಗಿದ್ದು, ಸದ್ರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡುರುವಿರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ-1ಃ ಈ ಅಪರಾಧದ ಬಗ್ಗೆ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ

(ದಿನಾಂಕಃ 7ನೇ ಡಿಸಂಬರ್ ತಿಂಗಳು 2017ರಂದು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ಮೇಲಿನ ಆರೋಪವನ್ನು ಓದಿ ಹೇಳಿ ವಿವರಿಸಿ ಉತ್ತರ ಪಡೆದುಕೊಳ್ಳಲಾಗಿದೆ ಎಂಬುದಾಗಿ ದೃಢೀಕರಿಸುತ್ತೇನೆ)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

Phs